ಇಂದು ದಿ: **05.02.2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು **5** ರಿಂದ **9** ನೇ ಪ್ರತಿವಾದಿಗಳ ಪರ: ಶ್ರೀ ಕೆ ಆರ್ ವಕೀಲರಿಂದ

ನಿಪಿ: 2 ರಲ್ಲಿ ಹೇಳಿರುವ 6,20,000/- ಹಣ ಕೊಡಲು ನಮ್ಮ ಬಳಿ ಹಣ ಇಲ್ಲದ ಕಾರಣ, ದಿ: 04.07.2019 ರಂದು ವಕೀಲರ ಮೂಲಕ ಪ್ರತಿವಾದಿಯರಿಗೆ ನೋಟಿಸನ್ನು ಕೊಡಿಸಿರುತ್ತೇನೆ ಎಂದರೆ ಸಾಕ್ಷಿ ಹೌದು ಎಂದು ಹೇಳಿ ಮುಂದುವರೆದು, ನನ್ನ ಬಳಿ ಹಣ ಇತ್ತು ಎಂದು ಹೇಳುತ್ತಾರೆ. ಸದರಿ ನೋಟೀಸಿನಲ್ಲಿ ನನ್ನ ಬಳಿ 6,20,000/- ಹಣ ಇತ್ತು ಎಂದು ತಿಳಿಸಿಲ್ಲ ಎನ್ನುವುದು ನಿಜ. ನಾನು ದಿ: 04.07.2019 ರಲ್ಲಿ ನನ್ನ ಬಳಿ ಹಣ ಇಲ್ಲದೆ ಇದ್ದರು ಸಹ ಹಣ ಇತ್ತು ಎಂದು ನೋಟಿಸನ್ನು ಕೊಡಿಸಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹಣ ಕೊಡಲು ನನ್ನ ಬಳಿ ಇಲ್ಲದ ಕಾರಣ ಆ ಸಂಕಟದಿಂದ ಪಾರಾಗಲು ಈ ನೋಟಿಸನ್ನು ಕೊಡಿಸಿರುತ್ತೇನೆ ಎಂದರೆ ಸರಿಯಲ್ಲ. ದಿ: 03.02.2019 ರಂದು ಉಳಿದ ಹಣ ತೆಗೆದುಕೊಂಡು ನೊಂದಣಿ ಮಾಡಿಸಿಕೊಡಿ ಎಂದು ಅವರ ಮನೆ ಬಳಿ ಹೋಗಿ ಕೇಳಿರುತ್ತೇನೆ. ದಿ: 03.07.2019 ರಂದು ಅವರ ಮನೆ ಬಳಿ ಹೋಗಿ ಬಾಕಿ ಇರುವ ಹಣ 6,20,000/- ರೂ.ಗಳ ಹಣದೊಂದಿಗೆ ಪ್ರತಿವಾದಿಯರನ್ನು ಕಂಡು ಸದರಿ ಹಣ ಪಡೆದುಕೊಂಡು ಒಪ್ಪಿಕೊಂಡ ಪ್ರಕಾರದಂತೆ ದಾವಾ ಆಸ್ತಿಯ ಬಗ್ಗೆ ನೊಂದಾಯಿತ ಕ್ರಯಪತ್ರ ಬರೆದುಕೊಡಿ ಎಂದು ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ. ಯಾವತ್ತು ಕೂಡ ಪ್ರತಿವಾದಿಯರ ಮನೆ ಬಳಿ ಹೋಗಿ ಕ್ರಯ ಬಾಕಿ ಹಣ ಪಡೆದು ನೊಂದಣಿ ಮಾಡಿಸಿಕೊಡಿ ಎಂದು ನಾನು ಕೇಳಿಲ್ಲ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿಯ ಚಿತಾವಣೆಯ ಮೇರೆಗೆ ಉಳಿದ ಪ್ರತಿವಾದಿಯರು ಒಂದಲ್ಲ ಒಂದು ಕಾರಣ ಹೇಳುತ್ತಾ ಕ್ರಯಪತ್ರವನ್ನು ಬರೆದುಕೊಡುವುದನ್ನು ದಿನಾ ತಳ್ಳುತ್ತ ಬರುತ್ತಿರುತ್ತಾರೆ ಎಂದು ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ. 1 ರಿಂದ 4 ನೇ ಪ್ರತಿವಾದಿಗಳು ಯಾರು ನಮ್ಮ ವಿರುದ್ದ ಇರುವುದಿಲ್ಲ. ಹಣ ತೆಗೆದುಕೊಂಡು ಕೊಡಲು ಹೋದಾಗ ಅವರು ತೆಗೆದುಕೊಂಡು ಬರೆದುಕೊಡಲು ನಿರಾಕರಿಸಿರುತ್ತಾರೆ ಎಂದು ನನ್ನ ಮುಖ್ಯ ವಿಚಾರಣೆ ಹಾಗೂ ವಾದ ಪತ್ರದಲ್ಲಿ ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ. ತದನಂತರವು ಸಹ ಪ್ರತಿವಾದಿಯರನ್ನು ಕಂಡು ಸದರಿ ವ್ಯವಹಾರದ ಬಾಬ್ತು ಬಾಕಿ ಇರುವ ಹಣವನ್ನು ಪಡೆದುಕೊಂಡು ಒಪ್ಪಿಕೊಂಡ ಪ್ರಕಾರ ದಾವಾ ಸ್ವತ್ತಿನ ಬಗ್ಗೆ ವಾದಿಯ ಹೆಸರಿಗೆ ನೊಂದಾಯಿತ ಕ್ರಯ ಪತ್ರ ಬರೆದುಕೊಡಿ ಎಂದು ಕೇಳುತ್ತ ಬಂದಿದ್ದು, ಆದರೆ ಪ್ರತಿವಾದಿಯರು ಒಪ್ಪಿಕೊಂಡ ಪ್ರಕಾರ ನೊಂದಾಯಿತ ಕ್ರಯ ಪತ್ರ ಬರೆದುಕೊಡಲು ನಿರಾಕರಿಸಿರುತ್ತಾರೆ ಮತ್ತು ತಪ್ಪಿರುತ್ತಾರೆ ಎಂದು ನನ್ನ ಮುಖ್ಯ ವಿಚಾರಣೆ ಹಾಗೂ ವಾದ ಪತ್ರದಲ್ಲಿ ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ. ವಾದಿ ದಿ: 03.07.2019 ರ ಪೂರ್ವದಲ್ಲಿ ಪ್ರತಿವಾದಿಯರಿಗೆ ನಮ್ಮ ಬಳಿ ಹಣ ಇದೆ ತೆಗೆದುಕೊಂಡು ಹೋಗಿ ಎಂದು ಆಶಾ ಪತ್ರ ವ್ಯವಹಾರ ಮಾಡಿದ್ದಾಳೆಯೇ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ಕ್ರಯದ ವ್ಯವಹಾರದ ಬಗ್ಗೆ ಆಶಾ ಇವಳು ಏನೇನು ಚೌಕಾಸಿ ಮಾಡಿರುತ್ತಾಳೆ ಎಂದು ಗೊತ್ತು. ಆಶಾ ಅವರು ವ್ಯವಹಾರ

ಮಾಡುವಾಗ 10,80,000/- ಆದರೆ ಒಪ್ಪುತ್ತೇನೆ, ಅದರ ಮೇಲೆ ಬೇಡ ಎಂದು ಹೇಳಿರುತ್ತಾರೆ. ಅದನ್ನು ಹೊರತುಪಡಿಸಿ ಬೇರೆ ಯಾವುದೇ ಚೌಕಾಸಿಯನ್ನು ಮಾಡಿಲ್ಲ. ಚೌಕಾಸಿ ಮಾಡಿದಾಗ ಅವರ ಮಕ್ಕಳು ಇದ್ದರು, ಗ್ರಾಮದವರು ಯಾರು ಇದ್ದರು ಎಂದು ಗೊತ್ತಿರುವುದಿಲ್ಲ. ಗ್ರಾಮದವರು ಬಿಟ್ಟು ನಾನು, ನನ್ನ ಹೆಂಡತಿ, ಮಂಜುನಾಥ, ಭೈರಪ್ಪ, ಸಿದ್ದೇಶ ಇದ್ದರು. ಅದರ ಮೊದಲು ಈ ವ್ಯವಹಾರದ ಕುರಿತು ನನ್ನ ಹೆಂಡತಿ ಪ್ರತಿವಾದಿಗಳೊಂದಿಗೆ ಏನೇನು ಮಾತನಾಡಿದ್ದಳು ಎಂದು ಗೊತ್ತಿರುವುದಿಲ್ಲ. ಯಾವ ವ್ಯವಹಾರವು ನಡೆದಿಲ್ಲ, ಪ್ರತಿವಾದಿಗಳ ಮಕ್ಕಳು ಇದ್ದರು, ಊರಿನವರು ಯಾರು ಇದ್ದರು ಎಂದು ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿಃ 2 ನ್ನು ಆಶಾ ಮತ್ತು 2 ನೇ ಪ್ರತಿವಾದಿಯ ಮಧ್ಯ ಆದ ಹಣದ ಭದ್ರತೆಯ ಸಲುವಾಗಿ 3 ನೇ ಪ್ರತಿವಾದಿಯ ಹೆಸರಿನಲ್ಲಿ ಅವನಿಗೆ ಗೊತ್ತಿಲ್ಲದ ಹಾಗೆ ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನನ್ನ ಹೆಂಡತಿ ವಕೀಲರ ಮೂಲಕ ಕಳುಹಿಸಿದ ನೋಟಿಸಿನಲ್ಲಿ ಏನೇನು ಇದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಸದರಿ ನೋಟಿಸಿನಲ್ಲಿ ಹೇಳಿರುವ ಎಲ್ಲಾ ಸಂಗತಿಗಳು ಶುದ್ಧ ಸುಳ್ಳು ಎಂದರೆ ಸರಿಯಲ್ಲ. ನಿಪಿಃ 2 ರ ಆಪಾದಿತ ಕ್ರಯದ ಕರಾರು ಪತ್ರ ಆದ ನಂತರ ಅದರ ಸಂಬಂಧ 1 ಬಾರಿ ಉಪನೊಂದಣಾಧಿಕಾರಿ ಕಛೇರಿಗೆ ದಿಃ 11.07.2019 ರಂದು ಹೋಗಿದ್ದೆ. ಆ ದಿನ ಪತ್ರ ಮಾಡಿಸಿಲ್ಲ. ಸದರಿ ದಿನ ಉಪನೊಂದಣಾಧಿಕಾರಿ ಕಛೇರಿಗೆ ಬಂದಿದ್ದ ಕುರಿತು ಆಶಾ ಅರ್ಜಿಯನ್ನು ಉಪನೊಂದಣಾಧಿಕಾರಿಗೆ ಕೊಟ್ಟಿದ್ದರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ನಾವು ಯಾರು ಕೂಡ ದಿಃ 11.07.2019 ರಂದು ಉಪನೊಂದಣಾಧಿಕಾರಿ ಕಛೇರಿಗೆ ಹೋಗದ ಕಾರಣ, ಆಶಾರವರು ಉಪನೊಂದಣಾಧಿಕಾರಿಗೆ ಅರ್ಜಿಯನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ಸದರಿ ದಿನ ನಾವು ಉಪನೊಂದಣಾಧಿಕಾರಿ ಕಛೇರಿಗೆ ಹೋಗಿದ್ದೇವು ಎಂದು ವಾದ ಪತ್ರ ಮತ್ತು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಹೇಳಿಲ್ಲ ಎನ್ನುವುದು ನಿಜ. ದಿಃ 11.07.2019 ರಂದು ಉಪನೊಂದಣಾಧಿಕಾರಿ ಕಛೇರಿಗೆ ನಾವು ಹೋಗದೆ ಇದ್ದರು ಸಹ ಹೋಗಿದ್ದೇವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕ್ರಯದ ಕರಾರಿನ ಭಾಗದಂತೆ ನಡೆದುಕೊಳ್ಳಲು ನಾವು ಸದಾ ತಯಾರಿ ಹಾಗೂ ಇಚ್ಚೆವುಳ್ಳರಾಗಿದ್ದೇವು ಎಂದು ವಾದಪತ್ರ, ನೋಟೀಸು ಮತ್ತು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಸುಳ್ಳು ಹೇಳಿರುತ್ತೇವೆ ಎಂದರೆ ಸರಿಯಲ್ಲ. ಕ್ರಯದ ವ್ಯವಹಾರ ಆಗದೆ ಇರುವ ಕಾರಣ, ಪ್ರತಿವಾದಿಗಳು ಕ್ರಯದ ಕರಾರಿನ ಭಾಗದಂತೆ ನಡೆದುಕೊಳ್ಳಲು ವಿಫಲರಾಗಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿಃ 2 ರಲ್ಲಿ ಹೇಳಿದಂತೆ ಯಾವುದೆ ಕ್ರಯದ ಕರಾರು ಆಗಿಲ್ಲ, ಆ ಕಾರಣ ನಾವು ದಾವೆಯಲ್ಲಿ ಕೇಳಿದಂತೆ ಯಾವುದೇ ಪರಿಹಾರ ಪಡೆಯಲು ಅರ್ಹರು ಎಂದರೆ ಸರಿಯಲ್ಲ. ದಾವಾ ಸ್ವತ್ತು 1 ರಿಂದ 4 ನೇ ಪ್ರತಿವಾದಿಗಳಿಗೆ ಪಿತ್ರಾರ್ಜಿತವಾಗಿದ ಬಂದ ಸ್ವತ್ತು. ದಾವಾ ಸ್ವತ್ತನ್ನು ಖರೀದಿ ಮಾಡುವ ಸಮಯದಲ್ಲಿ ಅದಕ್ಕೆ

ಸಂಬಂಧಪಟ್ಟ ದಾಖಲೆಗಳನ್ನು ಪಡೆದು ವಕೀಲರ ಮೂಲಕ ಸಲಹೆಯನ್ನು ಪಡೆದಿಲ್ಲ. ದಾವಾ ಸ್ವತ್ತನ್ನು ನಾವು 1 ರಿಂದ 4 ನೇ ಪ್ರತಿವಾದಿಗಳಿಂದ ಖರೀದಿ ಮಾಡುತ್ತಿದ್ದೇವೆ ಯಾರಾದರು ತಕರಾರು ಇದ್ದರೆ ಮಾಡಿ ಎಂದು ಪೇಪರ್ ಪ್ರಕಟಣೆಯನ್ನು ಮಾಡಿಲ್ಲ. ದಾವಾ ಸ್ವತ್ತಿನಲ್ಲಿ ಪ್ರತಿವಾದಿಯ ಮಕ್ಕಳಿಗೆ ಹಕ್ಕು ಇದ್ದ ಬಗ್ಗೆ ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ಗಮನಿಸಿಲ್ಲ ಎಂದು ಹೇಳುತ್ತಾರೆ. ನಮ್ಮ ಪಿತ್ರಾರ್ಜಿತ ಆಸ್ತಿಗಳಲ್ಲಿ ನಮ್ಮ ಮಕ್ಕಳಿಗೆ ಹಕ್ಕು ಇರುತ್ತದೆ. 1 ರಿಂದ 4 ನೇ ಪ್ರತಿವಾದಿಗಳಿಗೆ ಎಷ್ಟು ಜನ ಹೆಣ್ಣು ಮಕ್ಕಳು ಹಾಗೂ ಎಷ್ಟು ಜನ ಗಂಡು ಮಕ್ಕಳು ಇರುತ್ತಾರೆ ಎನ್ನುವುದನ್ನು ದಾವಾ ಆಸ್ತಿಯನ್ನು ಖರೀದಿಸುವಾಗ ತಿಳಿದುಕೊಂಡಿಲ್ಲ. ದಾವಾ ಸ್ವತ್ತಿನಲ್ಲಿ ಅವರ ಮಕ್ಕಳಿಗೆ ಹಕ್ಕು ಇದ್ದು ಖರೀದಿ ಮಾಡಿದರೆ ಮುಂದೆ ತೊಂದರೆ ಆಗುತ್ತದೆ ಎನ್ನುವುದನ್ನು ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ತಿಳಿದುಕೊಂಡಿಲ್ಲ ಎಂದು ಹೇಳುತ್ತಾರೆ. ದಾವಾ ಸ್ವತ್ತಿನ ವ್ಯವಹಾರದ ಬಗ್ಗೆ ನಾವು ಪೂರ್ವಾಪರ ದಾಖಲೆಗಳ ಬಗ್ಗೆ ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ಜಮೀನಿನ ಕಂದಾಯ ದಾಖಲೆಗಳನ್ನು ನೋಡಿರುತ್ತೇನೆ ಎಂದು ಹೇಳುತ್ತಾರೆ. ನಿಪಿಃ 3 ನ್ನು ನಾನು ಹಾಜರುಪಡಿಸಿರುತ್ತೇನೆ. ನಿಪಿಃ 3 ಸರ್ವೆ ನಂ. 39/4 ಕ್ಕೆ ಸಂಬಂಧಪಟ್ಟದ್ದು ಅದರಲ್ಲಿ 6 ಎಕರೆ ಜಮೀನು ಇದ್ದು ಅದು 1 ರಿಂದ 4 ನೇ ಪ್ರತಿವಾದಿಯರ ಹೆಸರಿನಲ್ಲಿ ಇರುತ್ತದೆ. ಸದರಿ ಆಸ್ತಿಯು 1 ರಿಂದ 4 ನೇ ಪ್ರತಿವಾದಿಗಳ ತಂದೆಗೆ ಅವರ ಸಹೋದರರ ಮಧ್ಯೆ ಆದ ಪಾಲು ವಿಭಾಗದಲ್ಲಿ ಬಂದಿರುತ್ತದೆ ಎನ್ನುವುದು ನಿಜ. ಸದರಿ ಪಾಲು ವಿಭಾಗ ಆದ ನಂತರ ದಾವಾ ಆಸ್ತಿಯು 1 ರಿಂದ 4 ನೇ ಪ್ರತಿವಾದಿಯ ಹೆಸರಿಗೆ ಮಾತ್ರ ಜಂಟಿಯಾಗಿ ಬಂದಿರುತ್ತದೆ ಎನ್ನುವುದು ನಿಜ. ಸರ್ವೇ ಇಲಾಖೆಯಲ್ಲಿ ಸರ್ವೇ ಆದ ನಂತರ ಪ್ರತ್ಯೇಕ ಪೋಡಾಗಿ ಅದರಂತೆ ಮ್ಯುಟೇಶನ್ ಆಗಿ 1 ರಿಂದ 4 ನೇ ಪ್ರತಿವಾದಿಯ ಹೆಸರಿಗೆ ಬಂದಿರುತ್ತದೆ ಎನ್ನುವುದು ನಿಜ. ನಿಪಿಃ2 ನ್ನು ಮಾಡುವಂತಹ ಸಮಯದಲ್ಲಿ ಯಾವುದೇ ದಾಖಲೆಗಳ ಅವಶ್ಯಕತೆ ಇರಲಿಲ್ಲ, ನೇರವಾಗಿ ಕ್ರಯ ಪತ್ರವನ್ನೇ ಮಾಡಿಸಿಕೊಳ್ಳಬಹುದಿತ್ತು, ಎಂದರೆ ಸಾಕ್ಷಿ ಅವರ ಮಕ್ಕಳು ಬೇರೆ ಬೇರೆ ಊರಲ್ಲಿ ಇದ್ದಾರೆ ಸ್ವಲ್ಪ ಸಮಯ ತೆಗೆದುಕೊಂಡು ಕ್ರಯ ಮಾಡಿಸಿಕೊಡುತ್ತೇವೆ ಎಂದು ಹೇಳಿದ್ದರು ಎಂದು ಹೇಳುತ್ತಾರೆ. ನಿಪಿಃ2 ರ ಆಪಾದಿತ ಕ್ರಯದ ಕರಾರು ಪತ್ರ ನಮ್ಮ ಮತ್ತು 2 ನೇ ಪ್ರತಿವಾದಿಯ ಮಧ್ಯೆ ಆದ ವ್ಯವಹಾರದ ಭದ್ರತೆಯ ಸಲುವಾಗಿ ಆಗಿದ್ದು, ಅವರ ಮಕ್ಕಳು ಹೊರಗಡೆ ಇರುತ್ತಾರೆ ಸ್ವಲ್ಪ ಸಮಯ ತೆಗೆದುಕೊಂಡು ಕ್ರಯ ಪತ್ರ ಮಾಡಿಸಿಕೊಡುತ್ತೇವೆ ಎಂದು ಹೇಳಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ವ್ಯವಹಾರ ನಡೆಯದೆ ಇದ್ದ ಕಾರಣ, ಆ ದಿನ ನಾವು ಕ್ರಯ ಪತ್ರವನ್ನು ಮಾಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನಾವು ಹಾಕಿರುವ ದಾವೆಯಲ್ಲಿ ಯಾವುದೇ ಪರಿಹಾರವನ್ನು ಪಡೆಯಲು ನಮಗೆ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಆದ್ದರಿಂದ ದಾವೆಯಲ್ಲಿ ಕೇಳಿದಂತೆ ಪರಿಹಾರ ಪಡೆಯಲು ನಾವು ಅನರ್ಹರು ಎಂದರೆ ಸರಿಯಲ್ಲ. ಪ್ರತಿವಾದಿಗಳ ಆಸ್ತಿಯನ್ನು ಎತ್ತಿ ಹಾಕುವ ಸಲುವಾಗಿ ನಿಪಿಃ 2 ನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ.

ಪಾಟೀ ಸವಾಲು **1** ರಿಂದ **4** ನೇ ಪ್ರತಿವಾದಿಗಳ ಪರ: **1** ರಿಂದ **4** ನೇ ಪ್ರತಿವಾದಿಗಳು ಮತ್ತು ಅವರ ಪರ ವಕೀಲರು ಗೈರು ಹಾಜರಿದ್ದ ಕಾರಣ, ಏನು ಇಲ್ಲವೆಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆ: ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ.)

ಓ.ಹೇ.ಕೇ.ಸ.ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊಸದುರ್ಗ.